ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1979

ಉತ್ತರಿಸಬೇಕಾದ ದಿನಾಂಕ : 23.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಗ್ರಾಮೀಣ ಭಾಗದ ಹೈನುಗಾರಿಕೆಯಲ್ಲಿ ತೊಡಗ ಬಯಸುವ ನಿರುದ್ಯೋಗಿಗಳಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಸರ್ಕಾರದ ಯೋಜನೆ ಯಾವ ಹಂತದಲ್ಲಿದೆ;	ಸಹಕಾರ ಸಂಘಗಳ ಮೂಲಕ ಹೈನುಗಾರಿಕೆಯಲ್ಲಿ ತೊಡಗಿರುವ ಸದಸ್ಯರಿಗೆ ದುಡಿಯುವ ಬಂಡವಾಳಕ್ಕಾಗಿ ರೂ.2.00 ಲಕ್ಷದವರೆಗೆ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ಅಲ್ಪಾವಧಿ ಸಾಲ ವಿತರಿಸಲು ದಿನಾಂಕ:22.07.2020 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದೆ. ಇದಲ್ಲದೇ ಗ್ರಾಮೀಣ ಭಾಗದ ಸದಸ್ಯರು ಹೈನುಗಾರಿಕೆ ಕೈಗೊಳ್ಳಲು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಪಡೆಯಲು ಈ ಕೆಳಕಂಡ ಯೋಜನೆಗಳು ಇರುತ್ತವೆ. 1. 2020-21ನೇ ಸಾಲಿಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಿಸುವ ಯೋಜನೆಯನ್ನು ಸಹಕಾರ ಸಂಘಗಳ ಮೂಲಕ ಜಾರಿಗೊಳಿಸಲು ದಿನಾಂಕ:7.10.2020 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದ್ದು, ಇದರಲ್ಲಿ ಹೈನುಗಾರಿಕೆ ಕೈಗೊಳ್ಳಲು ರಾಸು ಖರೀದಿ, ಕೊಟ್ಟಿಗೆ ಮನೆ ನಿರ್ಮಾಣ ಮುಂತಾದ ಮೂಲ ಭೂತ ಸೌಕರ್ಯಗಳನ್ನು ಹೊಂದಲು ಅವಕಾಶ ಇರುತ್ತದೆ. 2. 2020-21ನೇ ಸಾಲಿಗೆ ಪುರುಷ ಸ್ವಸಹಾಯ ಗುಂಪುಗಳಿಗೆ ಸಹಕಾರ ಸಂಘಗಳ ಮೂಲಕ ರೂ.5.00 ಲಕ್ಷಗಳ ವರೆಗಿನ ಸಾಲವನ್ನು ನಿವ್ವಳ ಶೇ.4 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆಯನ್ನು ಜಾರಿಗೊಳಿಸಿದ್ದು ದಿನಾಂಕ:13.10.2020 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದ್ದು, ಇದರಲ್ಲಿ ಪುರುಷ ಸ್ವಸಹಾಯ ಗುಂಪುಗಳ ಸದಸ್ಯರು ಸಹ ಹೈನುಗಾರಿಕೆ ಕೈಗೊಳ್ಳಲು ಅವಕಾಶವಿರುತ್ತದೆ.
ಆ)	ಸದರಿ ಯೋಜನೆಯ ಫಲಾನುಭವಿಗಳು ಹೊಂದಿರ ಬೇಕಾದ ಮಾನದಂಡಗಳೇನು;	ಸಹಕಾರ ಸಂಘಗಳ ಮೂಲಕ ಸಾಲ ಪಡೆಯಲು ಫಲಾನುಭವಿಗಳು ಹೊಂದಿರಬೇಕಾದ ಮಾನದಂಡಗಳು ಈ ಕೆಳಗಿನಂತಿರುತ್ತವೆ. **ಶೂನ್ಯ ಬಡ್ಡಿ ದರದಲ್ಲಿ ದುಡಿಯುವ ಬಂಡವಾಳ ಸಾಲಕ್ಕೆ ಇರುವ ಮಾನದಂಡಗಳು** 1. ಫಲಾನುಭವಿಗಳು ಹಾಲು ಉತ್ಪಾದಕ ಸಹಕಾರ ಸಂಘಗಳಲ್ಲಿ ಹಾಲು ಪೂರೈಸುತ್ತಿರಬೇಕು. 2. ಸದಸ್ಯರು ಈ ಸಂಘಗಳ ಮೂಲಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಅರ್ಜಿ ಸಲ್ಲಿಸಬೇಕು.

<table>
<tr>
<td></td>
<td></td>
<td>
<u>ಹೈನುಗಾರಿಕೆ ಕೈಗೊಳ್ಳಲು ಶೇ.3ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲದ ಮಾನದಂಡಗಳು</u>

ಫಲಾನುಭವಿಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಸದಸ್ಯರಾಗಿರತಕ್ಕದ್ದು.
ಹೈನುಗಾರಿಕೆ ಮೇವು ಬೆಳೆಯಲು ಭೂಮಿ ಹೊಂದಿರಬೇಕು.
ಇತರೇ ಯಾವುದೇ ಬ್ಯಾಂಕುಗಳಲ್ಲಿ ಈ ಹೈನುಗಾರಿಕೆ ಉದ್ದೇಶಕ್ಕೆ ಸಾಲ ಪಡೆದಿರಬಾರದು.

<u>ಹೈನುಗಾರಿಕೆ ಕೈಗೊಳ್ಳಲು ಶೇ.4ರ ಬಡ್ಡಿ ದರದಲ್ಲಿ ಸ್ವಸಹಾಯ ಗುಂಪುಗಳ ಸಾಲದ ಮಾನದಂಡಗಳು</u>

ಫಲಾನುಭವಿಗಳು ಸ್ವಸಹಾಯ ಗುಂಪುಗಳಲ್ಲಿ ಸದಸ್ಯರಾಗಿರಬೇಕು.
ಸದರಿ ಸ್ವಸಹಾಯ ಗುಂಪುಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಅಥವಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಉಳಿತಾಯ ಖಾತೆ ಪ್ರಾರಂಭಿಸಿ, 6 ತಿಂಗಳವರೆಗೆ ಉಳಿತಾಯ ಮಾಡಿ ಕಾಲ ಕಾಲಕ್ಕೆ ಸಭೆ ಜರುಗಿಸಿರಬೇಕು.
ಇತರೇ ಯಾವುದೇ ಬ್ಯಾಂಕುಗಳಲ್ಲಿ ಸಾಲ ಪಡೆದಿರಬಾರದು.

</td>
</tr>
<tr>
<td>ಇ)</td>
<td>ಕಳೆದ ಮೂರು ವರ್ಷಗಳಲ್ಲಿ ಸದರಿ ಯೋಜನೆಗೊಳಪಟ್ಟ ಫಲಾನುಭವಿಗಳ / ತಿರಸ್ಕೃತ ಅರ್ಜಿಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)</td>
<td>ಹೈನುಗಾರಿಕೆಗೆ ರೂ.2.00 ಲಕ್ಷಗಳ ಶೂನ್ಯ ಬಡ್ಡಿ ದರದಲ್ಲಿ ದುಡಿಯುವ ಬಂಡವಾಳ ಸಾಲ ಒದಗಿಸುವ ಯೋಜನೆಯಲ್ಲಿ ರಾಜ್ಯದಲ್ಲಿನ ಸಹಕಾರ ಸಂಘಗಳ ಮೂಲಕ 61835 ಫಲಾನುಭವಿಗಳಿಗೆ ರೂ.117.05 ಕೋಟಿ ಸಾಲ ಮಂಜೂರು ಮಾಡಿದ್ದು, 6309 ಜನರ ಸಾಲದ ಅರ್ಜಿಗಳು ತಿರಸ್ಕೃತಗೊಂಡಿರುತ್ತವೆ. ಇತರೇ ವಾಣಿಜ್ಯ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ/ ಸಾಲ ಇರುವುದರಿಂದ, ಹಾಲು ಪೂರೈಸದೇ ಇರುವುದರಿಂದ, ರೈತರು ದಾಖಲೆಗಳನ್ನು ಒದಗಿಸದೇ ಇರುವುದರಿಂದ ಡಿ.ಸಿ.ಸಿ ಬ್ಯಾಂಕುಗಳು ಅರ್ಜಿಗಳನ್ನು ತಿರಸ್ಕರಿಸಿರುತ್ತವೆ. ಮಾಹಿತಿಯನ್ನು <u>ಅನುಬಂಧ-1</u>ರಲ್ಲಿ ನೀಡಲಾಗಿದೆ.</td>
</tr>
<tr>
<td>ಈ)</td>
<td>ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಸದರಿ ಯೋಜನೆಗೊಳಪಟ್ಟ ಫಲಾನುಭವಿಗಳ ಸಂಖ್ಯೆ ಹಾಗೂ ನೀಡಲಾದ ಮೊತ್ತವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)</td>
<td>ಸದರಿ ಯೋಜನೆಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿತರಿಸಿದ ಸಾಲದ ವಿವರ ಈ ಕೆಳಗಿನಂತಿರುತ್ತದೆ.
(ರೂ.ಲಕ್ಷಗಳಲ್ಲಿ)
<table>
<tr><th rowspan="2">ತಾಲ್ಲೂಕಿನ ಹೆಸರು</th><th colspan="2">ಶೂನ್ಯ ಬಡ್ಡಿದರದ ದುಡಿಯುವ ಬಂಡವಾಳ ಸಾಲ</th><th colspan="2">ಹೈನುಗಾರಿಕೆ ಉದ್ದೇಶಕ್ಕೆ ಶೇ.3ರ ಬಡ್ಡಿ ದರದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ</th></tr>
<tr><th>ಸಂಖ್ಯೆ</th><th>ಮೊತ್ತ</th><th>ಸಂಖ್ಯೆ</th><th>ಮೊತ್ತ</th></tr>
<tr><td>ಬೆಳಗಾವಿ</td><td>0</td><td>0</td><td>0</td><td>0</td></tr>
<tr><td>ಖಾನಾಪೂರ</td><td>0</td><td>0</td><td>10</td><td>17.78</td></tr>
<tr><td>ಹುಕ್ಕೇರಿ</td><td>931</td><td>260.68</td><td>85</td><td>47.81</td></tr>
</table>
</td>
</tr>
</table>

		ಬೈಲಹೊಂಗಲ	0	0	0	0
		ಗೋಕಾಕ	220	60.90	0	0
		ಸವದತ್ತಿ	0	0	0	0
		ರಾಮದುರ್ಗ	458	122.64	3	1.60
		ಚಿಕ್ಕೋಡಿ	244	68.32	0	0
		ಅಥಣಿ	0	0	0	0
		ರಾಯಬಾಗ	87	24.36	111	67.73
		ಒಟ್ಟು	**1940**	**536.90**	**209**	**134.92**

ಕಡತ ಸಂಖ್ಯೆ: ಸಿಒ 69 ಸಿಸಿಬಿ 2021

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1979 ಗೆ ಅನುಬಂಧ-1

ಪಶುಸಂಗೋಪನೆಗೆ ಶೂನ್ಯ ಬಡ್ಡಿ ದರದಲ್ಲಿ ದುಡಿಯುವ ಬಂಡವಾಳ ಸಾಲ ವಿತರಿಸುವ ಯೋಜನೆಯಲ್ಲಿ ಸಹಕಾರ ಸಂಘಗಳು ಸಾಲ ಮಂಜೂರು ಮಾಡಿದ ಮತ್ತು ಅರ್ಜಿ ತಿರಸ್ಕರಿಸಿದ ವಿವರ

(ರೂ. ಲಕ್ಷಗಳಲ್ಲಿ)

(ರೂ.ಲಕ್ಷ)

ಕ್ರ. ಸಂ	ಡಿಸಿಸಿ ಬ್ಯಾಂಕಿನ ಹೆಸರು	ಬ್ಯಾಂಕುಗಳಿಗೆ ಸಾಲಕ್ಕಾಗಿ ಬಂದ ಅರ್ಜಿಗಳ ವಿವರ		ಮಂಜೂರು ಮಾಡಿದ ಸಾಲದ ವಿವರ		ಸಾಲ ವಿತರಣೆ ವಿವರ		ಅರ್ಜಿ ತಿರಸ್ಕರಿಸಿದ ವಿವರ	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	Bagalkot	5707	1660.67	5707	1660.67	1426	324.47	0	0.00
2	Bangalore	1544	394.54	1544	394.54	891	215.82	0	0.00
3	Belgaum	1940	536.90	1940	536.90	1940	536.90	0	0.00
4	Bellary	2015	543.56	2015	543.56	2015	543.56	0	0.00
5	Bidar	4457	623.98	578	80.92	561	77.56	3230	452.20
6	Bijapur	272	74.63	154	42.88	154	42.88	118	31.75
7	Chikmagalur	1505	609.35	1505	609.35	1144	476.75	0	0.00
8	Chitradurga	1725	426.72	1725	426.72	1725	426.72	0	0.00
9	Davangere	1153	174.86	1153	174.86	1153	174.86	0	0.00
10	Gulburga	0	0.00	0	0.00	0	0.00	0	0.00
11	Hassan	26380	2638.00	22583	2258.30	22451	2245.10	2900	290.00
12	KCCBDharwad	635	630.00	673	292.68	673	292.68	0	0.00
13	North Kanara	1291	410.00	1291	410.00	1291	410.00	0	0.00
14	Kodagu	179	28.55	118	18.92	118	18.92	61	9.63
15	Kolar	2853	562.40	2853	562.40	2539	448.95	0	0.00
16	Mandya	2902	492.00	2902	492.00	2902	492.00	0	0.00
17	Mysore	3520	664.14	3520	664.14	3520	664.14	0	0.00
18	Raichur	2120	594.00	2120	594.00	1767	485.00	0	0.00
19	Shimoga	730	104.32	730	104.32	730	104.32	0	0.00
20	South Canara	7122	1613.29	7122	1613.29	7122	1613.29	0	0.00
21	Tumkur	1602	224.28	1602	224.28	1602	224.28	0	0.00
	Total	**69652**	**13006.19**	**61835**	**11704.73**	**55724**	**9818.20**	**6309**	**783.58**

ಸಹಕಾರ ಸಂಘಗಳ ಸಹಾಯಕ ನಿಬಂಧಕರು(ಪತ್ತು)